can say.

ಶ್ರೀ ಜಗದೀಶ್ ಶೆಟ್ಟರ್: ಹಿಂದೆ ಸಭಾತ್ಯಾಗ ಮಾಡಿದಾಗ ಪಾಸ್ ಮಾಡಿಕೊಂಡು ಹೋದರು. ಚರ್ಚೆ ಬೇಕಾಗಿಲ್ಲ, ನೀರಾದ ಬಗ್ಗೆ ಅವೈಜ್ಞಾನಿಕವೆಂದು ಹೇಳುತ್ತಾರೆ, ಆದರೆ ಚರ್ಚೆ ಎದುರಿಸಲಿಕ್ಕೆ ತಯಾರಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾವು ಚರ್ಚೆಗೆ ಸಿದ್ಧರಿದ್ದೇವೆ. ಇದನ್ನು ಮೊದಲು ಪಾಸ್ ಮಾಡಿಕೊಡಿ. ಆಮೇಲೆ ನೀವು ಎಷ್ಟು ಹೊತ್ತು ಚರ್ಚೆ ಮಾಡುತ್ತೀರೋ ಮಾಡಿ.....

ಅಧ್ಯಕ್ಷರು: ನೀವೆಲ್ಲರೂ ಮೊದಲು ಸಾಯಂಕಾಲ ೬ ಗಂಟೆಯವರೆಗೆ ಯೂನಿವರ್ಸಿಟಿ ಬಿಲ್ ಬಗ್ಗೆ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್: ನೀರಾ ಇಳಿಸುವ ವಿಚಾರ ಬಹಳ ಪ್ರಮುಖವಾದ ವಿಚಾರವಾಗಿದೆ. ಇದರ ಬಗ್ಗೆ ಬಹಳಷ್ಟು ಸದಸ್ಯರು ಅನೇಕ ವಿಚಾರಗಳನ್ನು ಸರ್ಕಾರಕ್ಕೆ ಹೇಳುವವರಿದ್ದಾರೆ. ಆದಕಾರಣ ಮೊದಲು ನೀರಾ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಸರ್ಕಾರದವರು ಒಪ್ಪಿದರೆ ನನ್ನದೇನೂ ಅಭ್ಯಂತರವಿಲ್ಲ. ನಾನು ಅಜೆಂಡಾ ಪ್ರಕಾರ ಹೋಗುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಮೊದಲು ನೀರಾ ಬಗ್ಗೆ ಚರ್ಚೆಯನ್ನು ತೆಗೆದುಕೊಳ್ಳದ ಸರ್ಕಾರದ ಧೋರಣೆಯನ್ನು ನಾವು ಖಂಡಿಸುತ್ತೇವೆ. ನೀರಾ ಬಗ್ಗೆ ಚರ್ಚೆಯನ್ನು ಮೊದಲು ತೆಗೆದುಕೊಳ್ಳಬೇಕೆಂದು ನಾವು ಧರಣಿಯನ್ನು ಮಾಡುತ್ತೇವೆ.

(ಸಂಯುಕ್ತ ಜನತಾದಳದ ಶಾಸಕರು ಸದನದ ಬಾವಿಯೊಳಗೆ ಬಂದು ಧರಣಿ ನಿರತರಾದರು)

ಡಾ:ಜಿ.ಪರಮೇಶ್ವರ್(ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದವರು ಶಿಕ್ಷಣಕ್ಕೆ ಮಹತ್ವವನ್ನು ಕೊಡುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್: ನಾವೇಕೆ ಶಿಕ್ಷಣಕ್ಕೆ ಮಹತ್ವ ಕೊಡುವುದಿಲ್ಲ? ನಾವು ಕಳೆದ ವಾರದಿಂದಲೂ ನೀರಾ ಇಳಿಸುವ ಅಗತ್ಯದ ಬಗ್ಗೆ ಚರ್ಚೆಗಾಗಿ ಕಾಯುತ್ತಿದ್ದೇವೆ. ಆದರೂ ಸರ್ಕಾರ ಇದನ್ನು ಪರಿಗಣಿಸದೇ ನೀರಾ ಇಳಿಸುವ ಬಗ್ಗೆ ಚರ್ಚೆಗೆ ಅವಕಾಶ ಕೊಡುತ್ತಿಲ್ಲವಾದ್ದರಿಂದ ಅದನ್ನು ಖಂಡಿಸಿ ನಾವು ಧರಣಿ ಮಾಡುತ್ತೇವೆ.

(ಬಿ.ಜೆ.ಪಿ. ಸದಸ್ಯರುಗಳೆಲ್ಲರೂ ಸದನದ ಬಾವಿಗೆ ಬಂದು ಧರಣಿ ನಿರತರಾದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಸಿಂಧ್ಯಾರವರು ಒಂದು ಸಲಹೆ ಕೊಡುತ್ತಾ ಸರ್ಕಾರದವರಿಗೂ ಕೂಡ ಯಾವುದೋ ಒಂದು ಸಲಹೆಯನ್ನು ಕೊಟ್ಟಿದ್ದೇವೆ, ಅದನ್ನು ಒಪ್ಪತಕ್ಕಂಥ ಸಾಧ್ಯತೆ ಇದೆ, ಆದುದರಿಂದ ಅದನ್ನು ಒಪ್ಪಿಕೊಂಡರೆ ಬಹುಶಃ ಬಿಲ್ ಪಾಸ್ ಮಾಡಿಸುವುದಕ್ಕೆ ತೊಂದರೆಯಾಗಲಾರದು ಎಂದು ಹೇಳಿದ್ದಾರೆ. ಆದುದರಿಂದ ಒಂದೈದು ನಿಮಿಷ ಆ ಸಲಹೆ ಯಾವುದು ಎಂಬ ಬಗ್ಗೆ ಪ್ರತಿಪಕ್ಷದವರು ಕೂಡ ಕುಳಿತು ಮಾತನಾಡಲಿ. ಅದು ಮುಗಿದ ಬಳಿಕ ಬಿಲ್ ಪಾಸ್ ಮಾಡಿಬಿಡಲಿ. ಬಿಲ್ ಪಾಸ್ ಆದ ನಂತರ ತಕ್ಷಣ ನೀರಾ ಬಗ್ಗೆ ಚರ್ಚೆ ಮಾಡಲಿ, ಚರ್ಚೆಗೆ ಸರ್ಕಾರ ಸಿದ್ಧವಿದೆ. ನೀವು ಈ ವಿಚಾರವನ್ನು ಸ್ಟಾಲ್ ಮಾಡುತ್ತಿದ್ದೀರಿ ಎನ್ನುವ ಅಭಿಪ್ರಾಯ ಬರುವುದೂ ಬೇಡ ಮತ್ತು ನಾವೂ ಕೂಡ ನೀರಾ ಬಗ್ಗೆ ಆಗುತ್ತಿರುವ ಚರ್ಚೆಗೆ ಅಡ್ಡ ಬರುತ್ತಿದ್ದೇವೆ ಎನ್ನುತಕ್ಕಂಥ ಅಭಿಪ್ರಾಯ ಬರುವುದು ಬೇಡ. ಅದಕ್ಕಾಗಿ ಒಂದು ಐದು ಅಥವಾ ಹತ್ತು ನಿಮಿಷ ಯಾವುದು ತಿದ್ದುಪಡಿ ಮಾಡಬೇಕು ಎಂಬುದನ್ನು ಮಾತನಾಡಿಕೊಂಡು ಬಿಲ್ ಪಾಸ್ ಮಾಡಿಬಿಡೋಣ. ನೀವೇ ಕೊಟ್ಟ ಸಲಹೆ ಪ್ರಕಾರ ನಾವು ನಡೆಯುತ್ತೇವೆ ಎಂದು ಹೇಳಿಕೊಂಡರೂ ಕೂಡ ನೀರಾ ಬಗ್ಗೆಯೇ ಮೊದಲು ಚರ್ಚೆ ಮಾಡಬೇಕು ಎಂದು ಹಟ ಹಿಡಿದರೆ ಅದು ಅಷ್ಟೊಂದು ಸಮಂಜಸವಲ್ಲವೆಂಬುದು ನನ್ನ ಅಭಿಪ್ರಾಯ.

(ಗೊಂದಲ)

ಅಧ್ಯಕ್ಷರು: I must go according to the agenda, that's all I can say. ಈಗ ೪.೦೦ ಗಂಟೆಯವರೆಗೆ ಸದನವನ್ನು ಮುಂದೂಡುತ್ತಿದ್ದೇನೆ. ಅಷ್ಟರೊಳಗೆ ನಾಯಕರುಗಳನ್ನು ಕರೆಸಿ ಒಂದು ತೀರ್ಮಾನವನ್ನು ಇದರ ಬಗ್ಗೆ ತೆಗೆದುಕೊಳ್ಳೋಣ.

(ಸದನವು ಮಧ್ಯಾಹ್ನ ೩-೩೦ಕ್ಕೆ ಮುಂದೂಡಿ ಮತ್ತೆ ೪-೦೦ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸದನವು ಮಧ್ಯಾಹ್ನ ೪-೦೦ ಗಂಟೆಗೆ ಸಮಾವೇಶಗೊಂಡಿತು)

(ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ್ ಹೆಚ್. ತಹಸೀಲ್ದಾರ್)ರವರು ಪೀಠವನ್ನಲಂಕರಿಸಿದರು)